**6. <u>ಸಿಬ್ಬಂದಿ ಅವಶ್ಯಕತೆ –ಮಾದರಿ</u>:(ಬೋಧಕ ಸಿಬ್ಬಂದಿ–ವಿದ್ಯಾರ್ಥಿ ಅನುಪಾತ):**

(i) ಅಖಿಲ ಭಾರತ ತಾಂತ್ರಿಕ ಪರಿಷತ್ತು ( ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿನ ಬೋಧಕರು ಮತ್ತು ಇತರೆ ಶೈಕ್ಷಣಿಕ ಸಿಬ್ಬಂದಿಗೆ ವೇತನ ಶ್ರೇಣಿ, ಸೇವಾ ಷರತ್ತುಗಳು ಮತ್ತು ವಿದ್ಯಾರ್ಹತೆ) (ಪದವಿ) ನಿಯಮಗಳು 2010 (ಅಧಿಸೂಚನೆ ಎಫ್.ಸಂಖ್ಯೆ:37–3/ಲೀಗಲ್/2010 ದಿನಾಂಕ:05.03.2010) ರನ್ವಯ ಕನಿಷ್ಠ 60 ಪ್ರವೇಶಾತಿಯುಳ್ಳ ಇಂಜಿನಿಯರಿಂಗ್ ವಿಭಾಗಕ್ಕೆ ಬೋಧಕ ಸಿಬ್ಬಂದಿ ಮಾದರಿಯನ್ನು 1:2:6 ರ ಅನುಪಾತದಲ್ಲಿ ಪ್ರೊಫೆಸರ್, ಅಸೋಸಿಯೇಟ್ ಪ್ರೊಫೆಸರ್, ಮತ್ತು ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗಳಿಗೆ ನಿಗದಿಪಡಿಸಲಾಗಿದೆ. ಈ ಸಿಬ್ಬಂದಿ ಮಾದರಿಯಂತೆ ಸಂಸ್ಥೆಯಲ್ಲಿನ ಪ್ರತಿ ಇಂಜಿನಿಯರಿಂಗ್ ವಿಭಾಗಗಳಲ್ಲಿನ ಪ್ರವೇಶಾತಿ ಸಂಖ್ಯೆಯನ್ನು ಪರಿಗಣಿಸಿ ಬೋಧಕ ಸಿಬ್ಬಂದಿ ಸಂಖ್ಯೆಯನ್ನು ನಿಗದಿಪಡಿಸಿದೆ. ಬೋಧಕ ಸಿಬ್ಬಂದಿ – ವಿದ್ಯಾರ್ಥಿ ಅನುಪಾತ ಪ್ರಮಾಣವು ಇಂಜಿನಿಯರಿಂಗ ಇಲಾಖೆಗಳಿಗೆ 1:20 ರಂತೆ ಹಾಗೂ ಎಂ.ಬಿ.ಎ. ಮತ್ತು ಎಂ.ಸಿ.ಎ. ಕೋರ್ಸುಗಳಿಗೆ 1:15 ರಂತೆ ಇರುತ್ತದೆ.

(ii) ಇಂಜಿನಿಯರಿಂಗ್ ಇಲಾಖೆಗಳಲ್ಲಿನ ಸ್ನಾತಕೋತ್ತರ ಪದವಿ ಸೀಟುಗಳಿಗೆ ಹೆಚ್ಚುವರಿ ಬೋಧಕ ಸಿಬ್ಬಂದಿಯನ್ನು 18 ಸೀಟುಗಳಿಗೆ 1: 1: 1: ಅನುಪಾತ ಪ್ರಮಾಣದಲ್ಲಿ, 24 ಸೀಟುಗಳಿಗೆ 1: 1: 2 ಅನುಪಾತ ಪ್ರಮಾಣದಲ್ಲಿ ಹಾಗೂ 30ಕ್ಕೂ ಹೆಚ್ಚಿನ ಸೀಟುಗಳಿಗೆ 1: 2: 2: ಅನುಪಾತ ಪ್ರಮಾಣದಲ್ಲಿ ನಿಗದಿಪಡಿಸಲಾಗಿದೆ. ಬೋಧಕ ಸಿಬ್ಬಂದಿಗೆ ವಿದ್ಯಾರ್ಹತೆ ಮತ್ತು ಅನುಭವವನ್ನು ಎ.ಐ.ಸಿ.ಟಿ.ಇ. ನಿಯಮಗಳಲ್ಲಿ ನಿಗದಿಪಡಿಸಿರುವಂತೆ ಅಳವಡಿಸಲಾಗಿದೆ.

(iii) ತಾಂತ್ರಿಕ ಮತ್ತು ಇತರೆ ಪೂರಕ ಸಿಬ್ಬಂದಿಯನ್ನು ಪ್ರತಿ ವಿಭಾಗಕ್ಕೆ ಫೋರ್‌ಮನ್–1 ರಂತೆ ಹಾಗೂ ಇನ್‌ಸ್ಟ್ರಕ್ಟರ್/ ಅಸಿಸ್ಟೆಂಟ್ ಇನ್‌ಸ್ಟ್ರಕ್ಟರ್/ ಮೆಕ್ಯಾನಿಕ್/ಹೆಲ್ಪರ್ ಗಳನ್ನು ಲ್ಯಾಬೋರೇಟರಿಗಳ ಸಂಖ್ಯೆಯ ಆಧಾರದ ಮೇಲೆ ನಿಗದಿಪಡಿಸಲಾಗಿದೆ. ತಾಂತ್ರಿಕ ಮತ್ತು ಪೂರಕ ಸಿಬ್ಬಂದಿಗೆ ವಿದ್ಯಾರ್ಹತೆಯನ್ನು ರಾಜ್ಯ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯಲ್ಲಿ ನಿಗದಿಪಡಿಸಿದಂತೆ ಅಳವಡಿಸಲಾಗಿದೆ.

(iv) ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ಅನುಮತಿಸಿರುವ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪೂರ್ಣಕಾಲಿಕ ನಿರ್ದೇಶಕರು/ಪ್ರಿನ್ಸಿಪಾಲ್ ಇರತಕ್ಕದ್ದು ಮತ್ತು ಈ ಹುದ್ದೆಯನ್ನು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ನಿಗದಿಪಡಿಸಿರುವ ವಿದ್ಯಾರ್ಹತೆ ಮತ್ತು ಇತರೆ ಅರ್ಹತಾ ಷರತ್ತುಗಳಿಗೆ ಅನುಗುಣವಾಗಿ ನೇಮಕ ಮಾಡಿಕೊಳ್ಳತಕ್ಕದ್ದು. ನಿರ್ದೇಶಕರು/ಪ್ರಿನ್ಸಿಪಾಲ್ ಹುದ್ದೆಯು ಬೋಧಕ ಸಿಬ್ಬಂದಿ: ವಿದ್ಯಾರ್ಥಿ ಸಂಖ್ಯೆ ಅನುಪಾತ ಪ್ರಮಾಣಕ್ಕೆ ಹೊರತಾಗಿರತಕ್ಕದ್ದು.

(v) ಉನ್ನತ ನಿಯಂತ್ರಣ ಪ್ರಾಧಿಕಾರ (ಅಪೆಕ್ಸ್ ಸಂಸ್ಥೆ) ಕಾಲಕಾಲಕ್ಕೆ ಹೊರಡಿಸುವ ತಿದ್ದುಪಡಿಗಳು/ ಪರಿಷ್ಕೃತ ಮಾರ್ಗಸೂಚಿಗಳನ್ನು ಕಾರ್ಯಕಾರಿ ಸಮಿತಿಯು ಸಂಸ್ಥೆಗೆ ಅಳವಡಿಸಿಕೊಳ್ಳಲು ಅನುಮೋದಿಸುವುದಕ್ಕೆ ಬದ್ಧವಾಗಿ ಅವುಗಳನ್ನು ಅನ್ವಯಿಸತಕ್ಕದ್ದಾಗಿದೆ.

**7. <u>ಕಾರ್ಯಭಾರ</u>:**

ಮಂಜೂರಾದ ಹುದ್ದೆಗಳಿಗೆ ನಿಯಮಾನುಸಾರ ಖಾಯಂ ಆಗಿ ನೇಮಕಗೊಂಡ ಬೋಧಕ ಸಿಬ್ಬಂದಿಯ ಕಾರ್ಯಭಾರವು ವಾರಕ್ಕೆ 40 ಗಂಟೆಗಳಿಗಿಂತ ಕಡಿಮೆ ಇರಕೂಡದು. ಬೋಧಕ ಸಿಬ್ಬಂದಿಯು ದಿನದ ಕೆಲಸದ ಅವಧಿಯಲ್ಲಿ ಕಾಲೇಜಿನಲ್ಲಿಯೇ ಉಪಸ್ಥಿತರಿರುವುದು ಅವಶ್ಯಕವಾಗಿದೆ. ಬೋಧಕ ಸಿಬ್ಬಂದಿಗೆ ಲ್ಯಾಬೋರೇಟರಿ ಒಳಗೊಂಡಂತೆ ಬೋಧನಾ ಅವಧಿಯನ್ನು ಈ ಕೆಳಕಂಡಂತೆ ನಿಗದಿಪಡಿಸಿದೆ.

(ಈ) ಅಂತಿಮ ಮೌಲ್ಯಮಾಪನದಲ್ಲಿ ಯಾವುದೇ ಅಭ್ಯರ್ಥಿಯು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತಿನ ಮಾರ್ಗಸೂಚಿಗಳನ್ನು ಪೂರೈಸದಿದ್ದಲ್ಲಿ, ಅಂತಹ ಅಭ್ಯರ್ಥಿಯನ್ನು ಕನಿಷ್ಠ ಒಂದು ವರ್ಷದ ಅವಧಿಯ ನಂತರ ಮಾತ್ರ ಮರುಮೌಲ್ಯಮಾಪನ ಮಾಡತಕ್ಕದ್ದು.

(ಉ) ವಿವಿಧ ವರ್ಗದ ವೃಂದಗಳಲ್ಲಿ ಉನ್ನತ ವೇತನ ದರ್ಜೆಗೆ ನೀಡಲಾಗುವ ಕೆರಿಯರ್ ಅಡ್ವಾನ್ಸ್‌ಮೆಂಟ್ ಸೌಲಭ್ಯವು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್ತು ನಿಗದಿಪಡಿಸಿರುವ ಅರ್ಹತಾ ಷರತ್ತುಗಳನ್ನು ಪೂರೈಸುವುದಕ್ಕೆ ಬದ್ಧವಾಗಿ ಜಾರಿಗೆ ಬರತಕ್ಕದ್ದು.

(ಊ) ಬೋಧಕ ವೃಂದದಲ್ಲಿ ಸ್ಥಾನಪನ್ನರಾಗಿರುವ ಸಿಬ್ಬಂದಿಗೆ ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಅಡಿಯಲ್ಲಿ ಅರ್ಹತೆಯನ್ನು ಹೊಂದಿರುವುದಕ್ಕೆ ಬದ್ಧವಾಗಿ ವಾರ್ಷಿಕವಾಗಿ ನಡೆಸುವ ಬಡ್ತಿ ಪ್ರಕ್ರಿಯೆಯಂತೆ ಖಾಲಿ ಹುದ್ದೆಯ ಲಭ್ಯತೆಯನ್ನು ಪರಿಗಣಿಸದೆ ಸರಳೀಕೃತ ವೃಂದ ರಚನೆಗೆ ಅನುಗುಣವಾಗಿ ಉನ್ನತ ಶೈಕ್ಷಣಿಕ ವೇತನ ದರ್ಜೆಗೆ ಬಡ್ತಿಯನ್ನು ನೀಡತಕ್ಕದ್ದು. ಉನ್ನತ ದರ್ಜೆಗೆ ನೀಡಲಾಗುವ ಇಂತಹ ಬಡ್ತಿಗಳಿಂದ ವೃಂದ ಅನುಪಾತ ಹೆಚ್ಚಾಗುವುದಾದರೂ, ವಿದ್ಯಾರ್ಥಿ : ಬೋಧಕ ಸಿಬ್ಬಂದಿ ಅನುಪಾತದಂತೆ ಇರಬೇಕಾದ ಕನಿಷ್ಠ ಬೋಧಕ ಸಿಬ್ಬಂದಿ ಪ್ರಮಾಣದಲ್ಲಿ ಯಾವುದೇ ವ್ಯತ್ಯಾಸ ಉಂಟಾಗುವಂತಿಲ್ಲ. ಈ ಹಿನ್ನೆಲೆಯಲ್ಲಿ ಷೆಡ್ಯೂಲ್–4ರಲ್ಲಿ ನಿಗದಿಪಡಿಸಿರುವಂತೆ ಮುಂಬಡ್ತಿ ಕೋಟಾದಲ್ಲಿ ಉದ್ಭವಿಸಿದ ಖಾಲಿ ಹುದ್ದೆಗೆ/ಹುದ್ದೆಗಳಿದ್ದಲ್ಲಿ ಮಾತ್ರ ಮುಂಬಡ್ತಿ ನೀಡಬೇಕು ಎಂಬ ಷರತ್ತು ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಅಡಿಯಲ್ಲಿ ಬರುವ ಬೋಧಕ ಸಿಬ್ಬಂದಿಗೆ ಅನ್ವಯವಾಗತಕ್ಕದ್ದಲ್ಲ.

(ಋ) ಬೋಧಕ ಸಿಬ್ಬಂದಿಯ ಅಂತರ್–ಜೇಷ್ಠತೆಯನ್ನು ನೇರ ನೇಮಕಾತಿ ಮೂಲಕ ಆಯ್ಕೆಯಾಗುವ ಅಭ್ಯರ್ಥಿಗೆ ಅವರು ಕರ್ತವ್ಯಕ್ಕೆ ವರದಿ ಮಾಡಿಕೊಂಡು ಹಾಜರಾದ ದಿನಾಂಕದಿಂದ ಮತ್ತು ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಅಡಿಯಲ್ಲಿ ಬಡ್ತಿ ಪಡೆಯುವ ಬೋಧಕ ಸಿಬ್ಬಂದಿಗೆ ಪರಾಮರ್ಶೆ ಮತ್ತು ಮೌಲ್ಯಮಾಪನ ಸಮಿತಿಯು ಅವರಿಗೆ ಶಿಫಾರಸು ಮಾಡುವ ಅರ್ಹತಾ ದಿನಾಂಕಕ್ಕೆ ಅನುಗುಣವಾಗಿ ನಿಗದಿಪಡಿಸತಕ್ಕದ್ದು. ಜೇಷ್ಠತೆಗೆ ಸಂಬಂಧಪಟ್ಟ ಇತರೆ ಎಲ್ಲಾ ವಿಷಯಗಳಿಗೆ ರಾಜ್ಯ ಸರ್ಕಾರವು ಜಾರಿಗೆ ತಂದಿರುವ ನಿಯಮಗಳು/ಮಾರ್ಗಸೂಚಿಗಳು ಅನ್ವಯವಾಗುವುದು.

(ಎ) ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಂ ಅಡಿಯಲ್ಲಿನ ಸೌಲಭ್ಯವು ಮಂಜೂರಾದ ಹಾಗೂ ಅಸ್ತಿತ್ವದಲ್ಲಿರುವ ಹುದ್ದೆಯನ್ನು ಹೊಂದಿರುವ ಬೋಧಕ ಸಿಬ್ಬಂದಿಗೆ ವೈಯಕ್ತಿಕ ಬಡ್ತಿಯಾಗಿದ್ದು, ಆಯಾ ಹುದ್ದೆಯಲ್ಲಿ ಸ್ಥಾನಪನ್ನರಾಗಿರುವ ಬೋಧಕ ಸಿಬ್ಬಂದಿಯ ನಿವೃತ್ತಿ ನಂತರ ಸದರಿ ಹುದ್ದೆಗಳು ಪೂರ್ವಸ್ಥಿತಿಯಲ್ಲಿನ ಮೂಲ ವೃಂದದ ದರ್ಜೆಗೆ ಪುನರ್‌ಸ್ಥಾಪಿತಗೊಳ್ಳುತ್ತವೆ.

17. <u>**ಇತರೆ ನಿಯಮಗಳ ಅನ್ವಯಿಕೆ:**</u>

ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯದ ಸಿಬ್ಬಂದಿಯ ಸೇವಾ ಷರತ್ತುಗಳಿಗೆ ಸಂಬಂಧಿಸಿದಂತೆ ನೇಮಕಾತಿ ಪ್ರಾಧಿಕಾರವು ಹೊರಡಿಸಿರುವ ಹಾಗೂ ಚಾಲ್ತಿಯಲ್ಲಿರುವ ನಿಯಮಾವಳಿಗಳು, ಈ ನಿಯಮಾವಳಿಗಳಲ್ಲಿನ ಉಪಬಂಧಗಳಿಗೆ ವಿರುದ್ಧವಾಗಿರದಿದ್ದಲ್ಲಿ, ಅವುಗಳು ಈ ನಿಯಮಾವಳಿಗಳನ್ವಯ ನೇಮಕಗೊಂಡ ನೌಕರರಿಗೂ ಅನ್ವಯಗೊಳ್ಳುತ್ತವೆ.

**18. ವ್ಯಾಖ್ಯಾನ:**

ಈ ನಿಯಮಾವಳಿಗಳ ಯಾವುದೇ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ತೊಂದರೆ/ಗೊಂದಲ ಕಂಡುಬಂದಲ್ಲಿ, ಕಾರ್ಯಕಾರಿ ಸಮಿತಿಯು ಅಂತಹ ಉಪಬಂಧಗಳನ್ನು ಕಾನೂನು ಅಧಿಕಾರಿ ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ ಇವರೊಂದಿಗೆ ಸಮಾಲೋಚಿಸಿ ವ್ಯಾಖ್ಯಾನಿಸತಕ್ಕದ್ದು ಮತ್ತು ಈ ಬಗ್ಗೆ ಕಾರ್ಯಕಾರಿ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.

ಆಡಳಿತಾಧಿಕಾರಿಯವರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ.ಸಿದ್ದಯ್ಯ)**
ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ರಾಜ್ಯ ಒಕ್ಕಲಿಗರ ಸಂಘ.

**ಇವರಿಗೆ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಹಕಾರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸಹಕಾರ ಸಂಘಗಳ ನಿಬಂಧಕರು, ಕರ್ನಾಟಕ, ನಂ.1, ಆಲಿ ಆಸ್ಕರ್ ರಸ್ತೆ, ಬೆಂಗಳೂರು.
4. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಪ್ಯಾಲೇಸ್ ರಸ್ತೆ, ಬೆಂಗಳೂರು.
5. ರಿಜಿಸ್ಟ್ರಾರ್, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.
6. ಆಡಳಿತಾಧಿಕಾರಿಗಳು, ರಾಜ್ಯ ಒಕ್ಕಲಿಗರ ಸಂಘ, ಕೆ.ಆರ್. ರಸ್ತೆ, ವಿ.ವಿ.ಪುರಂ, ಬೆಂಗಳೂರು.
7. ನಿರ್ದೇಶಕರು/ಪ್ರಿನ್ಸಿಪಾಲ್, ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ,, ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು.
8. ನೋಟೀಸ್ ಬೋರ್ಡ್, ರಾಜ್ಯ ಒಕ್ಕಲಿಗರ ಸಂಘ ಕೇಂದ್ರ ಕಛೇರಿ.
9. ನೋಟೀಸ್ ಬೋರ್ಡ್, ಬೆಂಗಳೂರು ತಾಂತ್ರಿಕ ಮಹಾವಿದ್ಯಾಲಯ, ಕೆ.ಆರ್.ರಸ್ತೆ, ವಿ.ವಿ.ಪುರಂ, ಬೆಂಗಳೂರು.
10. ಕಛೇರಿ ಕಡತ/ ಬಿಡಿ ಪ್ರತಿಗಳು.